**Spl.C.(Corruption)/03/2016**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 8

**ಪಿ ಡಬ್ಲೂಃ** 5

| | |
|---|---|
| ಸಾಕ್ಷಿಯ ಹೆಸರು - | ಕೊಟ್ರೇಶ |
| ತಂದೆಯ ಹೆಸರು - | ದುರ್ಗಪ್ಪ |
| ವಯಸ್ಸು - | 29 ವರ್ಷ |
| ಉದ್ಯೋಗ - | ಕೂಲಿ ಕೆಲಸ |
| ವಾಸಸ್ಥಳ - | ಕೆಳಗೇರಿ ಗ್ರಾಮ |

**ಸಾಕ್ಷಿಯನ್ನು ದಿನಾಂಕಃ 28-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

ಚಾಸಾ -1 ನನ್ನ ತಾಯಿ. ನನ್ನ ತಂದೆ 2000 ರಲ್ಲಿ ತೀರಿಕೊಂಡಿದ್ದಾರೆ. ನನ್ನ ತಂದೆಯ ಹೆಸರಿನಲ್ಲಿ ಕೊಟ್ಟೂರ ನಲ್ಲಿ ಜಮೀನು, ನಿವೇಶನ ಇತ್ತು. ತಂದೆ ತೀರಿದ ನಂತರ ಅದನ್ನು ತಾಯಿಯ ಹೆಸರಿಗೆ ಪವತಿ ಖಾತೆ ಮಾಡಿಸಬೇಕಾಗಿತ್ತು. ಹೀಗಾಗಿ, ನನ್ನ ತಾಯಿಯ ಕಡೆಯಿಂದ ಕೊಟ್ಟೂರು ಮುನಿಸಿಪಾಲಿಟಿಯಲ್ಲಿ ನೌಕರಿ ಮಾಡುತ್ತಿದ್ದ ಆರೋಪಿಯ ಬಳಿ ಒಂದು ಅರ್ಜಿ ಕೊಡಿಸಿದ್ದೇವು. ಆರೋಪಿ ಕೆಲಸ ಮಾಡಿ ಕೊಡಲು ರೂ. 15,000/- ಹಣಕ್ಕೆ ಬೇಡಿಕೆ ಇಟ್ಟಿದ್ದು. ಚೌಕಾಸಿಯ ನಂತರ ರೂ. 8,000/- ಕ್ಕೆ ಬಂದಿದ್ದು. ಪುನಃ ಚೌಕಾಸಿ ಮಾಡಿ ರೂ. 5,000/- ನಿಗದಿಯಾಗಿತ್ತು. ಆರೋಪಿಯನ್ನು ಟ್ರಾಪ್ ಮಾಡುವ 3 ದಿನಗಳ ಮುಂಚೆ ನಾನು ಹಾಗೂ ನನ್ನ ತಾಯಿ ಸೇರಿ ಕೊಟ್ಟೂರನ ಆರೋಪಿಯ ಕಚೇರಿಯಲ್ಲಿ ರೂ. 3,000/- ಹಣವನ್ನು ಆರೋಪಿಯ ಕೈಯಲ್ಲಿ ನೀಡಿದ್ದೇವು. ಉಳಿಕೆ ರೂ. 2,000/- ನೀಡಲು ಇಚ್ಛೆ ಇಲ್ಲದ ಕಾರಣ ಲೋಕಾಯುಕ್ತ ರಲ್ಲಿ ದೂರು ತಾಯಿಯ ಕಡೆಯಿಂದ ನೀಡಿದ್ದೇವು. ಶನಿವಾರ ಆರೋಪಿಯ ಕಚೇರಿಯ ಬಳಿ ಹೋದಾಗ ಆ ದಿನ ಆರೋಪಿ ರಜೆಯಲ್ಲಿ ಇದ್ದ. ಸೋಮವಾರ ತಾಯಿಯನ್ನು ಲೋಕಾಯುಕ್ತ ಕಚೇರಿಗೆ ಕಳುಹಿಸಿ ನಾನು ಕೂಲಿ ಕೆಲಸಕ್ಕೆ ಹೋಗಿದ್ದೆ.

ಮಧ್ಯಾಹ್ನ 01.30 ರ ಸುಮಾರಿಗೆ ನಾಗರಾಜ ಎಂಬಾತ ಫೋನ್ ಮಾಡಿ ಆರೋಪಿಯನ್ನು ರೆಡ್ ಹ್ಯಾಂಡ್ ಆಗಿ ಹಣದ ಸಮೇತ ಟ್ರಾಪ್ ಮಾಡಿದ್ದಾಗಿ ತಿಳಿಸಿದ. ನಾನು ತಕ್ಷಣ ಆರೋಪಿಯ ಕಚೇರಿಯ ಬಳಿ ನೋಡಿದಾಗ ಪೋಲಿಸರು ಆರೋಪಿಯನ್ನು ವಶಕ್ಕೆ ಪಡೆದಿದ್ದರು. ಆರೋಪಿ ಹಣಕ್ಕೆ ಬೇಡಿಕೆ ಇಟ್ಟಾಗ ನಾನು ಅದನ್ನು ನನ್ನ ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಂಡಿದ್ದೆ. ಅದನ್ನು ದೂರು ನೀಡುವಾಗ ಪೋಲಿಸರಿಗೆ ಹಸ್ತಾಂತರಿಸಿದ್ದೆ. ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್ ಎಂ., ವಕೀಲರಿಂದಃ**

ಈ ಹಂತದಲ್ಲಿ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ಹಾಗೂ ಈ ಪ್ರಕರಣ 2016 ರ ಪ್ರಕರಣವಾಗಿದ್ದು, 10 ವರ್ಷಕ್ಕೂ ಮೇಲ್ಪಟ್ಟ ಹಳೆಯ ಪ್ರಕರಣವಾದ ಪ್ರಯುಕ್ತ ಕಾಲಾವಕಾಶ ನಿರಾಕರಿಸಲಾಗಿದೆ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.